# ನಿವೃತ್ತಿಯೇ ಇಲ್ಲದ ಮುಖ್ಯಮಂತ್ರಿ

ಹವ್ಯಾಸಿ ರಂಗತಂಡ 'ಕಲಾ ಗಂಗೋತ್ರಿ'ಗೀಗ ಸುವರ್ಣ ಮಹೋತ್ಸವದ ಸಂಭ್ರಮ. ಈ ತಂಡದ ಸೂಪರ್ ಹಿಟ್ ನಾಟಕ 'ಮುಖ್ಯಮಂತ್ರಿ' ಜ. 22ರಂದು 800ನೇ ಪ್ರದರ್ಶನ ಕಾಣುತ್ತಿದೆ. ಈ ಹಿನ್ನೆಲೆಯಲ್ಲಿ 'ಮುಖ್ಯಮಂತ್ರಿ' ರೂಪುಗೊಂಡ ಬಗೆ, ಪ್ರದರ್ಶನದ ವಿಶೇಷಗಳ ನೋಟ ಇಲ್ಲಿದೆ.

■ **ಮಂಜುಶ್ರೀ ಎಂ. ಕಡಕೋಳ**




'ಮುಖ್ಯಮಂತ್ರಿ' ಆಗಬೇಕೆನ್ನುವುದು ಬಹುತೇಕ ರಾಜಕಾರಣಿಗಳ ಕನಸು. ಅದಕ್ಕಾಗಿ ಅವರು ಮಾಡುವ ರಾಜಕೀಯ ಕಸರತ್ತುಗಳು ಒಂದೆರಡಲ್ಲ. ಆದರೆ, ಇದ್ಯಾವ ಕಸರತ್ತು ಮಾಡದೇ, ಹೊನ್ನಸಂದ್ರ ನರಸಿಂಹಯ್ಯ ಚಂದ್ರಶೇಖರ್ ಅರ್ಥಾತ್ ಚಂದ್ರು ಅವರಿಗೆ 'ಮುಖ್ಯಮಂತ್ರಿ' ಪಟ್ಟ ಒಲಿದು ಬಂದಿದೆ, ರಂಗಭೂಮಿ ಮೂಲಕ. ನಾಟಕದ ಪಾತ್ರದ ಜೊತೆಗೇ ಆ ಹೆಸರಿನ ನಂಟೂ ಬೆಸೆದು 'ಮುಖ್ಯಮಂತ್ರಿ' ಚಂದ್ರು ಆಗಿದ್ದು ಈಗ ಇತಿಹಾಸ. ಅವರಿಗೆ 'ಮುಖ್ಯಮಂತ್ರಿ' ಪಾತ್ರ ಒಲಿದು ಬಂದ ಕಥೆಯೂ ನಾಟಕದಷ್ಟೇ ರೋಚಕ.

ಹಿಂದಿ ನಾಟಕಕಾರ ರಣಜಿತ್ ಕಪೂರ್ 1980ರಲ್ಲಿ 'ಮುಖ್ಯಮಂತ್ರಿ' ನಾಟಕ ಬರೆದು, ಪ್ರದರ್ಶಿಸಿದ್ದರು. ಹೆಸರಿನ ಜೊತೆಗೆ ನಾಟಕದ ಕಥೆಯೂ ಆಕರ್ಷಕವಾಗಿತ್ತು. ಗಂಭೀರ ನಾಟಕವಾಗಿದ್ದ ಇದನ್ನು ನಟ ಹಾಗೂ ಇಂಗ್ಲಿಷ್ ಪ್ರಾಧ್ಯಾಪಕ ಟಿ.ಎಸ್. ಲೋಹಿತಾಶ್ವ ಕನ್ನಡಕ್ಕೆ ತಂದರು. ಆಗ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ 'ಮುಖ್ಯಮಂತ್ರಿ' ಚಂದ್ರು ಗುಮಾಸ್ತರಾಗಿದ್ದರು. ಮೈಮ್ ಕಲಾವಿದರಾಗಿ ಅವರು ಪ್ರವರ್ಧಮಾನಕ್ಕೆ ಬರುತ್ತಿದ್ದ ದಿನಗಳವು. ರಂಗಭೂಮಿಯ ನಂಟಿನಿಂದ ಡಾ. ಬಿ.ವಿ. ರಾಜಾರಾಂ ಅವರ ಒಡನಾಟ ಬೆಸೆಯಿತು, 'ಮುಖ್ಯಮಂತ್ರಿ' ನಾಟಕದ ಹೆಸರು ಆಕರ್ಷಕವಾಗಿದ್ದರಿಂದ, ಅದನ್ನು ರಂಗದ ಮೇಲೆ ತರಬೇಕೆಂಬ ಅಭಿಲಾಷೆ ರಾಜಾರಾಂ ಅವರದ್ದಾಗಿತ್ತು. ನಾಟಕಕ್ಕೆ ಚಂದ್ರು, ರಾಜಾರಾಂ ನಿರ್ದೇಶನ. 'ಮುಖ್ಯಮಂತ್ರಿ' ಪಾತ್ರಕ್ಕೆ ಲೋಹಿತಾಶ್ವ ಎನ್ನುವ ತೀರ್ಮಾನವೂ ಆಯಿತು. ಆದರೆ, ಮುಂದೆ ಆಗಿದ್ದೇ ಬೇರೆ.

## ಆಕಸ್ಮಿಕವಾಗಿ ದಕ್ಕಿದ ಪಟ್ಟ

1980ರ ಡಿ. 4ರಂದು ಬೆಂಗಳೂರಿನ 'ಸಂಸ ಬಯಲು ರಂಗಮಂದಿರ'ದಲ್ಲಿ (ಆಗಿನ್ನೂ ಅದು ಸೈಕಲ್ ಸ್ಟ್ಯಾಂಡ್) ನಾಟಕ ಪ್ರದರ್ಶನ ಘೋಷಣೆಯಾಗಿತ್ತು. ಪ್ರದರ್ಶನಕ್ಕೆ ಇನ್ನೇನು ನಾಲ್ಕೈದು ದಿನಗಳಿರುವಾಗ ಲೋಹಿತಾಶ್ವ ಮತ್ತು ಚಂದ್ರು ಅವರಿಗೆ ಜ್ವರ ಕಾಣಿಸಿಕೊಂಡಿತು. ಚಂದ್ರು ಬೇಗ ಚೇತರಿಸಿಕೊಂಡರೆ, ಲೋಹಿತಾಶ್ವ ಅವರಿಗೆ ಟೈಫಾಯ್ಡ್ ಜ್ವರ. ನಾಟಕ ನಿಲ್ಲಿಸಬೇಕು ಎನ್ನುವಂಥ ಸಂದರ್ಭ. 'ಪ್ರದರ್ಶನ ನಿಲ್ಲಿಸೋದು ಬೇಡ. ಮುಂದಿನ ಶೋ ನಾನು ಮಾಡ್ತೀನಿ. ಇದೊಂದು ಶೋ ಮುಗಿಸಿ' ಎಂದರು ಲೋಹಿತಾಶ್ವ. ಅಷ್ಟುದ್ದದ ಸಂಭಾಷಣೆಗಳನ್ನು ನೆನಪಿನಲ್ಲಿಟ್ಟುಕೊಳ್ಳೋದು ಕಷ್ಟವಾಗಿದ್ದರಿಂದ, ಬಹುತೇಕರು 'ಮುಖ್ಯಮಂತ್ರಿ' ಪಾತ್ರದಿಂದ ಹಿಂದೆ ಸರಿದರು. ಕೊನೆಗೆ ನಾಟಕದ ನಿರ್ದೇಶಕರಾಗಿದ್ದ ಚಂದ್ರು ಅವರಿಗೇ 'ಮುಖ್ಯಮಂತ್ರಿ' ಪಟ್ಟ ಕಟ್ಟಲಾಯಿತು. ಮೊದಲ 8 ಪ್ರದರ್ಶನಗಳು ದಾಖಲೆ ನಿರ್ಮಿಸಿದವು. ಪ್ರತಿದಿನ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದ್ದ